ಮುಂಚೆ ಬರಬೇಕಾದವರು ಪ್ರೈವೇಟ್ ಬಸ್ಸಿನವರಿಗಿಂತ ಹಿಂದೆ ಬಿದ್ದು ಬರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ಅಂಥಾದ್ದು ಒಂದೆರಡು ಸಂದರ್ಭಗಳು ಗೊತ್ತಾದ ತಕ್ಷಣ ಅವರಿಗೆ ತಕ್ಕ ಶಿಕ್ಷೆಕೊಟ್ಟು, ಕೆಲವರನ್ನು ವಜಾ ಕೂಡ ಮಾಡಿ ಎಲ್ಲಾ ಸರಿಪಡಿಸಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಇಲ್ಲಿ ಬೆಂಗಳೂರಿನಲ್ಲಿಯೂ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳು, ಪ್ರೈವೇಟ್ ಬಸ್ಸುಗಳು ಹೊರಟಮೇಲೆ ಹೊರಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ಗೊತ್ತಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಇದು ಅಲ್ಲಿನ ಪೋಲೀಸಿನವರಿಗೆ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ವಿಚಾರಿಸಬೇಕು.

ಶ್ರೀ ಜಿ. ನಾರಾಯಣಗೌಡರು.—ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳವರು ಒಂದು ಅಸೋಸಿಯೇಷನ್ನೇ ನಾದರೂ ಮಾಡಿಕೊಂಡಿದ್ದಾರೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ಮಾಡಿಕೊಂಡಿರಬೇಕು.

ಜನಾಬ್ ಮಹಮದ್ ಷಲೀವುಲ್ಲಾರವರು (ಕೋಲಾರ ಮುನ್ಸಿಂ).—ಒಂದು ಸ್ಟೇಜ್ ಪೂರ್ತಿ ರಾಷ್ಟ್ರೀಕರಣವಾದ ಮೇಲೆ ಬೇರೆ ಸ್ಟೇಜ್ ತೆಗೆದುಕೊಳ್ಳಲಾಗುತ್ತದೆಂದು ಹೇಳಿದ್ದೀರಿ. ಇನ್ನೂ ಮೊದಲನೆಯ ಸ್ಟೇಜು ಪೂರೈಸಿಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—ಪೂರ್ತಿ ಆಗುವುದರಲ್ಲಿದೆ.

ಜನಾಬ್ ಮಹಮದ್ ವಲೀವುಲ್ಲಾರವರು.—ತಾವು ಇಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಮೈಸೂರಿನಿಂದ ಹೊರಡುವ ಬಸ್ಸುಗಳನ್ನೆಲ್ಲಾ ಮೊದಲನೆಯ ಸ್ಟೇಜ್ ಆದ ಮೇಲೆ ತೆಗೆದುಕೊಳ್ಳುತೆ ವೆಂದು ಹೇಳಿದ್ದೀರಿ. ಇನ್ನೂ ಬೆಂಗಳೂರಿನಿಂದ ಮೈಸೂರು ಮುಂತಾದ ಹೊರಗಡೆ ಪ್ರದೇಶಗಳಿಗೆ ಹೋಗುವ ಬಸ್ಸು ಲೈಕ್‌ಗಳನ್ನೂ, ಹೊರಗಿನಿಂದ ಬೆಂಗಳೂರಿಗೆ ಬರುವ ಬಸ್ಸು ಲೈಕ್‌ಗಳನ್ನೂ ರಾಷ್ಟ್ರೀಕರಣಮಾಡಿಲ್ಲವೇ ?

ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಮೂರು ನಾಲ್ಕು ಇವೆ.

ಜನಾಬ್ ಮಹಮದ್ ವಲೀವುಲ್ಲಾರವರು.—ಮೈಸೂರು ಬೆಂಗಳೂರು ಲೈನನ್ನೂ ತಾವು ತೆಗೆದುಕೊಂಡಿಲ್ಲವೆ ?

ಶ್ರೀ ಎಚ್. ಸಿದ್ದಯ್ಯನವರು.—ತೆಗೆದುಕೊಂಡಿದ್ದೇವೆ.

ಜನಾಬ್ ಮಹಮದ್ ವಲೀವುಲ್ಲಾರವರು.—ಹೇಗೆ ತೆಗೆದುಕೊಂಡಿರಿ ? ಇನ್ನೂ ಮೊದಲನೆಯ ಸ್ಟೇಜ್ ಪೂರ್ತಿಯಾಗಿಲ್ಲವಲ್ಲಾ ?

ಶ್ರೀ ಎಚ್. ಸಿದ್ದಯ್ಯನವರು.—ಅದು ಲಾಭದಾಯಕವಾದ ಒಂದು ವಿಚಾರ. ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ.

Sri Kadidal MANJAPPA (Shimoga District–General).—What is the percentage of income that is set apart for depreciation ?

Sri H. SIDDAIYA.–20 or 25 per cent.

Abolition of Jodidari, Inamthi and Kayamgutta systems in the State.

*Q. 60—**Sri M. V. KRISHNAPPA** (Kolar District—General) —

Will the Government be pleased to state :—

(a) whether they contemplate to abolish Jodidari, Inamthi and Kayamgutta systems in the State ;

(b) if so, when ?

A.—**Sri H. SIDDAIYA** (Minister for Revenue and Excise).—

(a) The report of the Committee for Revision of the Land Revenue System in Mysore, in this connection, is being examined.

(b) Does not arise in view of the above.

ಶ್ರೀ ಎಂ. ವಿ. ಕೃಷ್ಣಪ್ಪನವರು.—(a) ಪ್ರಶ್ನೆಗೆ ಉತ್ತರವಾಗಿ ಲ್ಯಾಂಡ್ ರೆವೆನ್ಯೂ ಕಮಿಟಿಯ ವರದಿಯನ್ನು ಪರಿಶೀಲಿಸುತ್ತಿದ್ದೇವೆಂದು ಹೇಳಿದ್ದೀರಿ. ಲ್ಯಾಂಡ್ ರೆವಿನ್ಯೂ ಕಮಿಟಿಗೆ ಇದೂ ಒಂದು term of reference ಆಗಿ ಕಳುಹಿಸಲ್ಪಟ್ಟಿತ್ತೇ ?

*ಶ್ರೀ ಎಚ್. ಸಿದ್ದಯ್ಯನವರು.—ಇತ್ತು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅವರು ಕೊಟ್ಟಿರುವ ವರದಿಯಲ್ಲಿ ಏನು ಹೇಳಿದ್ದಾರೆ ?

ಶ್ರೀ ಎಚ್. ಸಿದ್ದಯ್ಯನವರು.—ವರದಿಯ ಪ್ರತಿಯನ್ನು ಎಲ್ಲರಿಗೂ ಹಂಚಬೇಕೆಂದು ಹೇಳಿದೆ. ಇನ್ನೂ ತಮಗೆ ಕೊಟ್ಟಿಲ್ಲದಿದ್ದರೆ ಕಳುಹಿಸಿಕೊಡಲಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅದರಲ್ಲಿ ಜೋಡಿದಾರರಿಗೆ ಪರಿಹಾರ ದ್ರವ್ಯವನ್ನು ಕೊಡುವ ವಿಚಾರವನ್ನೂ ಹೇಳಿದ್ದಾರೆಯೇ ?

ಶ್ರೀ ಎಚ್. ಸಿದ್ದಯ್ಯನವರು.—ಪ್ರಸ್ತಾಪಮಾಡಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಯಾವ ರೀತಿ ?

ಶ್ರೀ ಎಚ್. ಸಿದ್ದಯ್ಯನವರು.—ತಮಗೇ ಆ ವರದಿಯನ್ನು ಕೊಡಲಾಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಂಸ್ಥಾನದಲ್ಲಿ ಜೋಡಿ ಖಾಯಂಗುತ್ತಾಗಳಿವೆ ?

ಶ್ರೀ ಎಚ್. ಸಿದ್ದಯ್ಯನವರು.—ಸುಮಾರು 2000.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಎರಡುಸಾವಿರ ಹಳ್ಳಿಗಳವರಿಗೂ ಪರಿಹಾರವನ್ನು ಕೊಟ್ಟು ಸರ್ಕಾರದವರು ಕೊಂಡುಕೊಳ್ಳುತ್ತಾರೆಯೇ ?

Sri H. SIDDAIYA.—That is under consideration.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಜೋಡಿ, ಖಾಯಂಗುತ್ತಾ ಮುಂತಾದುವುಗಳನ್ನು ವಜಾ ಮಾಡಿ ಸರ್ಕಾರಕ್ಕೆ ತೆಗೆದುಕೊಳ್ಳುವುದು alienated ಹಳ್ಳಿಗಳಿಗೆ ಮಾತ್ರ ಅನ್ವಯವಾಗುತ್ತದೆಯೋ ಅಥವಾ ಸರ್ಕಾರಿ ಜೋಡಿ ಇನಾಂತಿಗಳಿಗೂ ಅನ್ವಯವಾಗುತ್ತದೆಯೋ?

ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಾ ವಿಷಯಗಳಲ್ಲೂ ಅನ್ವಯಿಸುತ್ತದೆ.

ಶ್ರೀ ಕೆ. ಸುಬ್ಬರಾಯರು.—ಸರ್ಕಾರಿ ಜೋಡಿ ಗ್ರಾಮಗಳ ವಿಚಾರದಲ್ಲೂ ಸಮಿತಿಯವರು ತಮ್ಮ ವರದಿಯಲ್ಲಿ ಏನಾದರೂ ಸಲಹೆ ಮಾಡಿದ್ದಾರೆಯೇ?

Sri H. SIDDAIYA—I do not exactly remember.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಸಮಿತಿಯವರು ತಮ್ಮ ಆಖ್ಯೆರ್ ವರದಿಯನ್ನು ಕಳುಹಿಸುವುದಕ್ಕೆ ಮುಂಚೆ ಇಂಟೆರಿಮ್ ವರದಿಯನ್ನೇನಾದರೂ ಸರ್ಕಾರಕ್ಕೆ ಕಳುಹಿಸಿದ್ದರೇ?

ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸಿದ್ದಾರೆ,

ಶ್ರೀ ಎಲ್. ಸಿದ್ದಪ್ಪನವರು.—ಅದರ ಮೇಲೆ ಕಾರ್ಯಕ್ರಮ ತೆಗೆದುಕೊಂಡಿರಾ?

ಶ್ರೀ ಎಚ್. ಸಿದ್ದಯ್ಯನವರು.—ಪೂರ್ಣ ವರದಿ ಬಂದ ಮೇಲೆ ಲ್ಯಾಂಡ್ ರೆವೆನ್ಯೂ, ಇದು—ಎರಡನ್ನೂ ಒಟ್ಟಿಗೆ ಮಾಡಬೇಕೆಂದು ಮಾಡಿದ್ದೇನೆ.

ಶ್ರೀ ಎಲ್. ಸಿದ್ದಪ್ಪನವರು.—ಆ ಇಂಟೆರಿಮ್ ವರದಿಯಲ್ಲಿ ಜೋಡಿ ಇನಾಂತಿಗಳ ವಿಷಯವನ್ನೇ ಅಲ್ಲವೇ ಹೇಳಿರುವುದು?

ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಲ್. ಸಿದ್ದಪ್ಪನವರು.—ಜರೂರಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದಲ್ಲವೇ ಅದನ್ನು ಕಳುಹಿಸಿದ್ದು? ಸರ್ಕಾರದವರು ಆ ವಿಚಾರದಲ್ಲಿ ಗಮನಕೊಟ್ಟಿದ್ದಾರೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರು ಆ ವಿಚಾರದಲ್ಲಿ ಹೆಚ್ಚಿಗೆ ಗಮನ ಕೊಟ್ಟಿದ್ದಾರೆ.

ಶ್ರೀ ಎಲ್. ಸಿದ್ದಪ್ಪನವರು.—ಹೆಚ್ಚು ಗಮನ ಕೊಟ್ಟಿದ್ದರೆ ಸರ್ಕಾರದವರೇಕೆ ನಿರ್ಧಾರ ಮಾಡಿಲ್ಲ?

ಶ್ರೀ. ಎಚ್. ಸಿದ್ದಯ್ಯನವರು.—ಪೂರ್ತಿ ಭೂಗಂದಾಯ ಪದ್ಧತಿಯನ್ನೇ ಪರ್ಯಾಲೋಚನೆ ಮಾಡಿ ಒಂದು ಮಸೂದೆಯನ್ನೇ ತರಬೇಕೆಂದು ಹೇಳಿ ಮಧ್ಯೆ ಕೈಬಿಟ್ಟಿದೆ.

Recommendations of the Land Revenue Enquiry Committee.

*Q.—76. **Sri D. H. CHANDRASEKHARAIYA** (Chitaldrug District—General).—Will the Government be pleased to state.—

(a) whether the Land Revenue Enquiry Committee has submitted its Report to the Government;

(b) the decisions that are taken by them on the recommendations of the Committee?

*A.—**Sri H. SIDDAIYA** (Minister for Revenue and Excise).— (a) Yes.

(b) The report is under consideration.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು.—ಈ ವರದಿಯು ತಮ್ಮ ಕೈಗೆ ಯಾವಾಗ ಬಂತು?

*ಶ್ರೀ ಎಚ್. ಸಿದ್ದಯ್ಯನವರು.—ಈ ತಿಂಗಳ ಒಂದನೆಯ ತಾರೀಖು.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು.—ಇಂಟೆರಿಮ್ ವರದಿಯು ಬಂದದ್ದು ಯಾವಾಗ?

ಶ್ರೀ ಎಚ್. ಸಿದ್ದಯ್ಯನವರು.—ಜನವರಿಯಲ್ಲಿ ಬಂದಿದೆ.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು.—ಅದರ ಮೇಲೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸ ವಾಗುತ್ತದೆ?

ಶ್ರೀ ಎಚ್. ಸಿದ್ದಯ್ಯನವರು.—ಮುಂದಿನ ಅಧಿವೇಶನದ ಹೊತ್ತಿಗೆ ಆಗಬಹುದು.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು.—ಹೊರಗಡೆ ಅಂದರೆ ಇಂಡಿಯಾ ದೇಶದ ಇತರ ಭಾಗಗಳಾದ ಮದರಾಸ್, ಉತ್ತರ ಪ್ರದೇಶ, ಇತ್ಯಾದಿ ಅನೇಕ ಕಡೆಗಳಲ್ಲಿ ಭೂ ಕಂದಾಯ ಪರಿಶೀಲನಾ ಸಮಿತಿಗಳು ನೇಮಕವಾಗಿದ್ದು—ಅವು ಅಲ್ಲೆಲ್ಲಾ ಈ ಜಮ್ಮಾರ್ದಾರಿ ಪದ್ಧತಿಯನ್ನು ವಿನ್ಯಾಮಾಡಿ, ಅದರಂತೆ ಕೆಲಸಕಾರ್ಯಗಳು ಜಾರಿಗೆ ಈಗಾಗಲೇ ಬಂದಿರತಕ್ಕುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದಯ್ಯನವರು.—ಅಲ್ಲೆಲ್ಲ ಇರತಕ್ಕ ಜಮ್ಮಾರ್ದಾರಿ ಪದ್ಧತಿಗೂ ನಮ್ಮ ಮೈಸೂರು ದೇಶದಲ್ಲಿ ರತಕ್ಕ ಜಮ್ಮಾರ್ದಾರಿ ಪದ್ಧತಿಗೂ ಬಹಳ ವ್ಯತ್ಯಾಸವಿದೆ ಎಂದು ಹೇಳಿದರೆ ಸಾಕಾಗಿದೆ.

ಶ್ರೀ ಡಿ. ಎಚ್. ಚೆಂದ್ರಶೇಖರಯ್ಯನವರು.—ಇರಬಹುದು. ಇಲ್ಲಿನ ರೈತರಿಗೆ ಇದರಿಂದ ಬಹಳ ತೊಂದರೆಯಾಗಿರುತ್ತೆಂದು, ನಮ್ಮ ಸಂಸ್ಥಾನದಲ್ಲಿರತಕ್ಕ ರೈತರು ಸುಮಾರು 30–40 ವರ್ಷಗಳ ಹಿಂದಿನಿಂದಲೂ ಒಂದೇ ಸಮನಾಗಿ ಸರ್ಕಾರಕ್ಕೆ ಮನವಿಗಳನ್ನು ಮಾಡಿಕೊಂಡಿದ್ದರೂ ಅದರಿಂದ ಏನೂ ಇತ್ಯರ್ಥವಾಗಲಲ್ಲವೆಂದು ತಾನೆ ಈಚೆಗೆ ಈ ಸಮಿತಿಯನ್ನು ನೇಮಕ ಮಾಡಿದುದು?

ಶ್ರೀ ಎಚ್. ಸಿದ್ದಯ್ಯನವರು.—ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯವನ್ನೂ ಮನಸ್ಸಿನಲ್ಲಿಟ್ಟುಕೊಂಡು ಸಮಿತಿಯನ್ನು ನೇಮಕಮಾಡಲಾಗಿದೆ.

Sri Kadidal MANJAPPA (Shimoga District—General).—Is there any recommendation in the matter of safeguarding the interests of the tenant cultivators of the State?

Sri H. SIDDAIYA.—Yes.

Sri Kadidal MANJAPPA.—Has it come to the notice of the Government that the tenant cultivators, especially in Malnad areas, are urging for the enactment of a Tenancy Act?

Mr. SPEAKER.—How does that question arise here?

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಕಂದಾಯ ವಸೂಲಿಯ ಪದ್ಧತಿಯನ್ನೇ ವಜಾ ಮಾಡಬೇಕೆಂದು ಅದರಲ್ಲೇನಾದರೂ ನಮೂದಾಗಿದೆಯೇ?

ಅಧ್ಯಕ್ಷರು.—ಅದರಲ್ಲಿ ಇದನ್ನು ಹೇಗೆ ನಮೂದು ಮಾಡುವುದಕ್ಕಾಗುತ್ತದೆ?